All India Radio: Bangalore
National Bulletin In Kannada
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
29.11.2026 1.10 p.m.
<><><><>

ಮುಖ್ಯಾಂಶಗಳು

1. ದೃಢ ಸಂಕಲ್ಪದಿಂದ ಮಾದಕ ವ್ಯಸನ ಗೆದ್ದ ಯುವಕರು, ನಶಾಮುಕ್ತ ಅಭಿಯಾನಕ್ಕೆ ಸ್ಫೂರ್ತಿ- ಪ್ರಧಾನಿ ನರೇಂದ್ರ ಮೋದಿ
2. ೧೦೦ನೇ ಆವೃತ್ತಿ 'ಫಿಟ್ ಇಂಡಿಯಾ ಸಂಡೇಸ್ ಆನ್ ಸೈಕಲ್' ಅಭಿಯಾನ; ದೈಹಿಕ ಕ್ಷಮತೆ ಕುರಿತು ಮನದ ಮಾತಿನಲ್ಲಿ ಪ್ರಧಾನಿ ಪ್ರಸ್ತಾಪ
3. ಸದೃಢ ಆರೋಗ್ಯಕರ ಭಾರತ ನಿರ್ಮಾಣಕ್ಕೆ ಕೈಜೋಡಿಸುವಂತೆ ನಾಗರಿಕರಿಗೆ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಕರೆ
4. ಆಧುನಿಕ ಯುದ್ಧತಂತ್ರದಲ್ಲಿ ಕೃತಕ ಬುದ್ಧಿಮತ್ತೆ, ಬಾಹ್ಯಾಕಾಶ, ಸೈಬರ್ ವಲಯಗಳ ಪಾತ್ರ ಹೆಚ್ಚಳ- ರಕ್ಷಣಾ ಸಚಿವ ರಾಜನಾಥ್ ಸಿಂಗ್
5. ಟೆಸ್ಟ್ ಕ್ರಿಕೆಟ್: ಮೂರನೇ ದಿನದಾಟದ ಅಂತ್ಯಕ್ಕೆ ಭಾರತದ ವಿರುದ್ಧ ನ್ಯೂಜಿಲೆಂಡ್ ೨೪೩ ರನ್ ಮುನ್ನಡೆ

<><><><>

ದೃಢ ಸಂಕಲ್ಪದಿಂದ ಮಾದಕ ವ್ಯಸನ ಗೆದ್ದ ಯುವಕರು, ನಶಾಮುಕ್ತ ಅಭಿಯಾನಕ್ಕೆ ಸ್ಫೂರ್ತಿಯಾಗಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. 'ಮನ್ ಕಿ ಬಾತ್'ನ ೧೪ನೇ ಸಂಚಿಕೆಯಲ್ಲಿ 'ನಶಾ ಮುಕ್ತ ಯುವ ಅಭಿಯಾನ'ದ ಮೂಲಕ ಮಾದಕವಸ್ತು ವ್ಯಸನದ ವಿರುದ್ಧ ನಡೆಯುತ್ತಿರುವ ಹೋರಾಟವನ್ನು ಪ್ರಧಾನಿ ಪ್ರಸ್ತಾಪಿಸಿದರು. ದೆಹಲಿಯ ಸದರ್ ಬಾಜಾರ್‌ನಲ್ಲಿ ಅಜ್ಜಿಯ ಮನೆಯಲ್ಲಿ ಬೆಳೆದು, ಬಾಲ್ಯದಲ್ಲಿ ತಂದೆ ಮತ್ತು ನಂತರ ತಾಯಿ-ಅಜ್ಜಿಯನ್ನು ಕಳೆದುಕೊಂಡು, ಚಳಿಗಾಲದಲ್ಲಿ ಆಲೂಗಡ್ಡೆ ಖಾಲಿ ಚೀಲಗಳ ಮೇಲೆ ಮಲಗುತ್ತಾ, ಭಂಡಾರ ಹಾಗೂ ಲಂಗರ್‌ಗಳಲ್ಲಿ ಊಟ ಮಾಡುತ್ತಾ, ಕುಟುಂಬ ಮತ್ತು ಸ್ನೇಹಿತರಿಂದ ದೂರವಾಗಿದ್ದ ಯುವಕನೊಬ್ಬನೊಂದಿಗೆ ಅವರು ಮಾತನಾಡಿದರು. ದೆಹಲಿಯ ವಸಂತ್ ಕುಂಜ್‌ನಲ್ಲಿರುವ ಪುನರ್ವಸತಿ ಕೇಂದ್ರದಲ್ಲಿ ಚಿಕಿತ್ಸೆ ಪಡೆದು ದೃಢ ಸಂಕಲ್ಪದಿಂದ ವ್ಯಸನಮುಕ್ತನಾದ ಆ ಯುವಕನನ್ನು ಪ್ರಧಾನಿ ಅಭಿನಂದಿಸಿದರು.

ಧ್ವನಿ: ಪ್ರಧಾನಿ (ಸೆಕೆಂಡ್ಸ್) -ನಶಾಮುಕ್ತ

ಸರ್ಕಾರಿ ನೌಕರರ ತರಬೇತಿಗಾಗಿ ೧೭ ಭಾರತೀಯ ಭಾಷೆಗಳಲ್ಲಿ ೭ ಸಾವಿರಕ್ಕೂ ಹೆಚ್ಚು ಕೋರ್ಸ್‌ಗಳನ್ನು ಹೊಂದಿರುವ 'ಐಜಿಒಟಿ ಕರ್ಮಯೋಗಿ' ವೇದಿಕೆಯಲ್ಲಿ ಕೃತಕ ಬುದ್ಧಿಮತ್ತೆ ಹಾಗೂ ಹೊಸ ತಂತ್ರಜ್ಞಾನಗಳ ೨೦೦ಕ್ಕೂ ಅಧಿಕ ಕೋರ್ಸ್‌ಗಳಲ್ಲಿ ೩.೨೫ ಕೋಟಿಗೂ ಹೆಚ್ಚು ಕೋರ್ಸ್‌ಗಳು ಪೂರ್ಣಗೊಂಡಿವೆ ಎಂದು ಪ್ರಧಾನಿ ತಿಳಿಸಿದರು. ಆಶಾ, ಅಂಗನವಾಡಿ, ಆರೋಗ್ಯ, ಸ್ವಚ್ಛತಾ ಕಾರ್ಯಕರ್ತರು, ಶಿಕ್ಷಕರು ಮತ್ತು ಪೊಲೀಸರು 'ನಾಗರಿಕ ದೇವೋ ಭವ' ಮಂತ್ರದೊಂದಿಗೆ ಕಲಿಯುತ್ತಿರುವುದು ವಿಕಸಿತ ಭಾರತಕ್ಕೆ ಶಕ್ತಿಯಾಗಿದೆ ಎಂದರು. ಬಳಿಕ ಪ್ರಧಾನಿ, ೨೩ ಭಾಷೆಗಳಲ್ಲಿ ಲಭ್ಯವಿರುವ 'ಸಂಚಾರ ಸಾಥಿ' ಪೋರ್ಟಲ್‌ನ ಪ್ರಾಮುಖ್ಯತೆ ಮತ್ತು ಬಳಕೆ ಕುರಿತು ಮಾಹಿತಿ ಹಂಚಿಕೊಂಡರು. ಐಎಮ್‌ಇಐ ಸಂಖ್ಯೆಯ ನೆರವಿನಿಂದ ಕಳೆದುಹೋದ ೧೪ ಲಕ್ಷಕ್ಕೂ ಅಧಿಕ ಮೊಬೈಲ್ ಫೋನ್‌ಗಳನ್ನು ಮರಳಿ ನೀಡಿರುವ ಹಾಗೂ ೧ ಸಾವಿರದ ೬೦೦ಕ್ಕೂ ಹೆಚ್ಚು ಸಂಸ್ಥೆಗಳ ಸಂಪರ್ಕದೊಂದಿಗೆ ೫ ಸಾವಿರ ಕೋಟಿಗೂ ಮೀರಿದ ಸಂಭಾವ್ಯ ಸೈಬರ್ ವಂಚನೆ ತಡೆದಿರುವ 'ಸಂಚಾರ ಸಾಥಿ' ಪೋರ್ಟಲ್‌ನಲ್ಲಿ ವಂಚನೆ ಸಂಖ್ಯೆಗಳನ್ನು ವರದಿ ಮಾಡಿದ ಪುಣೆಯ ಹಿಮಾಂಶು ಸಿಂಗ್ ಮತ್ತು ನೆಲ್ಲೂರಿನ ವಿವೇಕ್ ಅಲ್ಲರಿ ಅವರನ್ನು ಶ್ಲಾಘಿಸಿದರು. ಪಾಟ್ನಾದ ಬಿಹಾರ ವಸ್ತುಸಂಗ್ರಹಾಲಯವು ವಿಶ್ವದ ಅತ್ಯುತ್ತಮ ೧೦೦ ವಸ್ತುಸಂಗ್ರಹಾಲಯಗಳಲ್ಲಿ ೯ನೇ ಸ್ಥಾನ ಮತ್ತು ಏಷ್ಯಾದಲ್ಲಿ ಮೊದಲ ಸ್ಥಾನ ಪಡೆದು ಪ್ಯಾರೀಸ್‌ನ ಲೂವ್ರ್ ಹಾಗೂ ನ್ಯೂಯಾರ್ಕ್‌ನ ದಿ ಮೆಟ್‌ಗಿಂತ ಮುಂದಿರುವುದನ್ನು ಪ್ರಧಾನಿ ಉಲ್ಲೇಖಿಸಿದರು. ಉತ್ಖನನದ ಸ್ಥಳದಲ್ಲೇ ೫ ಸಾವಿರಕ್ಕೂ ಅಧಿಕ ಕಲಾಕೃತಿಗಳು ಮತ್ತು ವಿಶೇಷ ಉತ್ಖನನ ಮಾರ್ಗದೊಂದಿಗೆ ರೂಪುಗೊಂಡ ಗುಜರಾತಿನ ವಡನಗರದ 'ಅನಂತ ಅನಾದಿ ವಡನಗರ ಪುರಾತತ್ವ ಪ್ರಾಯೋಗಿಕ ವಸ್ತು ಸಂಗ್ರಹಾಲಯಕ್ಕೆ 'ರೆಡ್ ಡಾಟ್: ಬೆಸ್ಟ್ ಆಫ್ ದಿ ಬೆಸ್ಟ್' ಪ್ರಶಸ್ತಿ ದೊರೆತಿದೆ. ಕಲೆಯ ಕ್ಷೇತ್ರದಲ್ಲಿ ಕೂಡಾ ಭಾರತ ಒಂದು ಬಹು ದೊಡ್ಡ ಸಾಧನೆ ಮಾಡಿದೆ ಎಂದು ಪ್ರಧಾನಿ, ಇಟಲಿಯ ವೆನಿಸ್ ಆರ್ಟ್ ಬಿನಾಲೆ ಎಂಬ ಪ್ರತಿಷ್ಠಿತ ಕಲಾ ಪ್ರದರ್ಶನದ ಕುರಿತು ಪ್ರಸ್ತಾಪಿಸಿದರು. ವೆನಿಸ್ ಆರ್ಟ್ ಬಿನಾಲೆಯಲ್ಲಿ ಭಾರತದ ಪೆವಿಲಿಯನ್‌ಗೆ ಸುಮಾರು ೪.೫ ಲಕ್ಷ ಮಂದಿ ಭೇಟಿ ನೀಡಿ ಅತ್ಯುತ್ತಮವೆಂದು ಆಯ್ಕೆ ಮಾಡಲಾಗಿದೆ ಎಂದು ಪ್ರಧಾನಿ, ಡಿಸೆಂಬರ್ ಮೊದಲ ವಾರದಲ್ಲಿ ದೆಹಲಿಯಲ್ಲಿ ಇದೇ ರೀತಿಯ ೧೦೮ ದಿನಗಳ ಕಾಲ ನಡೆಯಲಿರುವ 'ಇಂಡಿಯಾ ಬಿನಾಲೆ'ಗೆ ಮಕ್ಕಳನ್ನು ಕರೆದೊಯ್ಯುವಂತೆ ಮನವಿ ಮಾಡಿದರು. ತಮಿಳುನಾಡಿನ ಈರೋಡ್‌ನ ಸಾವಯವ ಪಾಮೈರಾ ಬೆಲ್ಲ ಯುರೋಪ್ ತಲುಪಿರುವುದು, ಚಾಕೊಲೇಟ್ ಮತ್ತು ಕೋಕೋ ರಫ್ತು ಶೇಕಡಾ ೨೫ರಷ್ಟು ಏರಿರುವ ಬಗ್ಗೆಯೂ ಪ್ರಧಾನಿ ಮನದ ಮಾತಿನಲಿ ಪ್ರಸ್ತಾಪಿಸಿದರು. ನಂತರ 'ಸಂಡೇಸ್ ಆನ್ ಸೈಕಲ್' ಅಭಿಯಾನ ೧೦೦ನೇ ಆವೃತ್ತಿಯನ್ನು ಆಚರಿಸುತ್ತಿರುವ ಹರ್ಷ ವ್ಯಕ್ತಪಡಿಸಿದ ಪ್ರಧಾನಿ, ೨೦೨೪ರ ಡಿಸೆಂಬರ್‌ನಿಂದ ೩೦ ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ ಸುಮಾರು ೩೭ ಲಕ್ಷ

ಜನರು ಈ ಅಭಿಯಾನಕ್ಕೆ ಕೈಜೋಡಿಸಿದ್ದಾರೆ ಎಂದು ಮಾಹಿತಿ ನೀಡಿದರು. ೨೦೩೨ರಲ್ಲಿ ಪುಣೆ ಯುಸಿಐ ರೋಡ್ ವರ್ಲ್ಡ್ ಚಾಂಪಿಯನ್‌ಶಿಪ್‌ಗೆ ಭಾರತ ಆತಿಥ್ಯ ವಹಿಸಲಿದೆ ಎಂದು ಹರ್ಷ ವ್ಯಕ್ತಪಡಿಸಿದ ಪ್ರಧಾನಿ, ಕ್ರೀಡಾ ಕ್ಷೇತ್ರದ ಭಾರತದ ಸಾಧನೆಗಳ ಮೇಲೆ ಬೆಳಕು ಚೆಲ್ಲಿದರು.

ಧ್ವನಿ: ಪ್ರಧಾನಿ (೧೯ ಸೆಕೆಂಡ್ಸ್) ಫಿಟ್ ಇಂಡಿಯಾ ಸಂಡೇಸ್ ಸೈಕಲ್

೧೦ನೇ ಸ್ಯಾಫ್ ಫುಟ್ಬಾಲ್ ಪ್ರಶಸ್ತಿ, ಲಕ್ಷ್ಯ ಸೇನ್ ಅವರ ಸತತ ಎರಡು ಬಾರಿಯ ಸೂಪರ್ ೫೦೦ ಪ್ರಶಸ್ತಿ ಹಾಗೂ ಕುಮಾಮೊಟೊ ಮಾಸ್ಟರ್ಸ್ ಜಯ, ಪಿ.ವಿ.ಸಿಂಧು ಅವರ ಹೈಲೋ ಓಪನ್ ಗೆಲುವುಗಳನ್ನು ಪ್ರಶಂಸಿಸಿದ ಪ್ರಧಾನಿ, ಡಿಸೆಂಬರ್ ೧೧ ರಿಂದ ೨೨ರವರೆಗೆ ತೆಲಂಗಾಣದ ಆರು ನಗರಗಳಲ್ಲಿ ನಡೆಯಲಿರುವ ಎನೇ ಖೇಲೋ ಇಂಡಿಯಾ ಯುವ ಕ್ರೀಡಾಕೂಟಕ್ಕೆ ಕ್ರೀಡಾಪಟುಗಳಿಗೆ ಶುಭ ಹಾರೈಸಿದರು. ಇದೇ ವೇಳೆ, ಸ್ಥೂಲಕಾಯ ತಡೆಯಲು ಅಡುಗೆ ಎಣ್ಣೆ ಬಳಕೆಯನ್ನು ಶೇಕಡಾ ೧೦ರಷ್ಟು ಕಡಿಮೆ ಮಾಡುವಂತೆ ಹಾಗೂ ಆಹಾರ ಪದ್ಧತಿ ಮತ್ತು ವ್ಯಾಯಾಮದ ಬಗ್ಗೆ ಜಾಗರೂಕರಾಗಿರುವಂತೆ ಜನತೆಗೆ ಪ್ರಧಾನಿ ಮತ್ತೊಮ್ಮೆ ಕರೆ ನೀಡಿದರು. ಕೆನಡಾದ ಗ್ರೇಟರ್ ಟೊರೊಂಟೊ ಮತ್ತು ಹ್ಯಾಮಿಲ್ಟನ್‌ನಲ್ಲಿ ತಿಂಗಳಿಗೆ ಸುಮಾರು ೬೦ ಸಾವಿರ ಜನರಿಗೆ ನೆರವಾಗುವ 'ಸಾಯಿ ಧಾಮ್ ಫುಡ್ ಬ್ಯಾಂಕ್' ಮತ್ತು ರೆಡ್ ಎಫ್ಎಂನ ಕುಲ್ವಿಂದರ್ ಸಂಘೇರಾ ಅವರ ಸಮುದಾಯ ರೇಡಿಯೋ ಸೇವೆಯನ್ನು ಪ್ರಧಾನಿ ಶ್ಲಾಘಿಸಿದರು. ಬಾಗ್ದಾದ್‌ನಲ್ಲಿ ಸೇವೆ ಸಲ್ಲಿಸಿದ್ದ ಸಿಖ್ ಗುರುಗಳ ಚಿತ್ರಕಾರ ಶೋಭಾ ಸಿಂಗ್ ಅವರ ೧೨೫ನೇ ಜನ್ಮಜಯಂತಿ ಸ್ಮರಣಾರ್ಥ ನಾಣ್ಯ ಬಿಡುಗಡೆ ಕುರಿತು ಪ್ರಸ್ತಾಪಿಸಿದರು. ನಾಳೆ ಬಿ.ಎನ್.ರಾವ್ ಅವರ ಪುಣ್ಯತಿಥಿ ಸಂದರ್ಭದಲ್ಲಿ ಅವರಿಗೆ ಗೌರವನಮನ ಸಲ್ಲಿಸಿದ ಪ್ರಧಾನಿ, ಸಂವಿಧಾನ ರಚನೆಯಲ್ಲಿ ಅವರ ಪಾತ್ರವನ್ನು ಸ್ಮರಿಸಿದರು.

<><><><>

ಸದೃಢ ಮತ್ತು ಆರೋಗ್ಯಕರ ಭಾರತದ ಗುರಿಯನ್ನು ಸಾಧಿಸುವಲ್ಲಿ ನಾಗರಿಕರು ಮತ್ತು ಯುವಜನರು ನಿರ್ಣಾಯಕ ಪಾತ್ರ ವಹಿಸಬೇಕಿದೆ ಎಂದು ಕೇಂದ್ರ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಡಾ.ಮನ್ಸುಖ್ ಮಾಂಡವಿಯಾ ಹೇಳಿದ್ದಾರೆ. ಪುಣೆಯ ಪಿಂಪ್ರಿ-ಚಿಂಚ್‌ವಾಡ್‌ನ ಮೋಶಿಯಲ್ಲಿಂದು ನಡೆದ 'ಫಿಟ್ ಇಂಡಿಯಾ ಸಂಡೇಸ್ ಆನ್ ಸೈಕಲ್' ಉಪಕ್ರಮದ ೧೦೦ನೇ ಆವೃತ್ತಿಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ದೇಶದಾದ್ಯಂತ ೨೫೦ ಸ್ಥಳಗಳಲ್ಲಿ ಆರಂಭವಾದ ಈ ಸೈಕ್ಲಿಂಗ್ ಉಪಕ್ರಮವು ಅಲ್ಪಾವಧಿಯಲ್ಲಿಯೇ ೪೦ ಸಾವಿರ ಸ್ಥಳಗಳಿಗೆ ವಿಸ್ತರಿಸಿದೆ. ಈ ಉಪಕ್ರಮವು ಸಾರ್ವಜನಿಕ ಆರೋಗ್ಯವನ್ನು ಉತ್ತೇಜಿಸುವುದರ ಜೊತೆಗೆ ಮಾಲಿನ್ಯ ನಿಯಂತ್ರಣದ ಬಗ್ಗೆಯೂ ಜಾಗೃತಿ ಮೂಡಿಸುತ್ತಿದೆ ಎಂದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ 'ಅಭಿವೃದ್ಧಿ ಹೊಂದಿದ ಭಾರತಕ್ಕಾಗಿ ಫಿಟ್‌ನೆಸ್ ಡೋಸ್ - ಪ್ರತಿದಿನ ಅರ್ಧ ಗಂಟೆ'

ಎಂಬ ಸಂದೇಶವನ್ನು ಉಲ್ಲೇಖಿಸಿದ ಸಚಿವರು, ನಾಗರಿಕರು ಪ್ರತಿದಿನ ಕನಿಷ್ಠ ೩೦ ನಿಮಿಷಗಳ ಕಾಲ ದೈಹಿಕ ವ್ಯಾಯಾಮಕ್ಕಾಗಿ ಮೀಸಲಿಡುವಂತೆ ಮನವಿ ಮಾಡಿದರು.

<><><><>

ಆಧುನಿಕ ಯುದ್ಧತಂತ್ರವು ಭೂಮಿ, ಜಲ ಮತ್ತು ವಾಯು ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗಿಲ್ಲ. ಸೈಬರ್ ವಲಯ, ಬಾಹ್ಯಾಕಾಶ ಮತ್ತು ಕೃತಕ ಬುದ್ಧಿಮತ್ತೆಯ ಮೂಲಕವೂ ಯುದ್ಧಗಳು ನಡೆಯುತ್ತಿವೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ಪುಣೆಯ ಖಡಕ್ವಾಸ್ಲಾದ ಖೇತ್ರಪಾಲ್ ಪಥಸಂಚಲನ ಮೈದಾನದಲ್ಲಿ ನಡೆದ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ ೧೫೧ನೇ ಕೋರ್ಸ್‌ನ ನಿರ್ಗಮನ ಪಥಸಂಚಲನದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು. ಬದಲಾಗುತ್ತಿರುವ ಕಾಲಘಟ್ಟಕ್ಕೆ ಭಾರತ ಹೊಂದಿಕೊಳ್ಳಬೇಕು ಹಾಗೂ ಮಾನವಶಕ್ತಿಯಿಂದ ಯಂತ್ರಶಕ್ತಿಯತ್ತ ಗಮನ ಹರಿಸಬೇಕು ಎಂದು ಸಚಿವರು ಹೇಳಿದರು. ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ವೀರರ ಪರಂಪರೆ ಮತ್ತು ಸಂಪ್ರದಾಯವನ್ನು ಕೆಡೆಟ್‌ಗಳು ಮುಂದುವರಿಸುತ್ತಿದ್ದು, ಕಠಿಣ ನಿರ್ಧಾರಗಳನ್ನು ಕೈಗೊಳ್ಳಲು ಹಾಗೂ ಕುಟುಂಬದಿಂದ ದೂರವಿದ್ದು ಕರ್ತವ್ಯ ನಿರ್ವಹಿಸಲು ಮಾನಸಿಕವಾಗಿ ಸಿದ್ಧರಾಗಿರಬೇಕು ಎಂದು ಅವರು ತಿಳಿಸಿದರು. ಅಂಕಿತ್ ಕುಮಾರ್ ಸಿಂಗ್ ಅವರಿಗೆ ರಾಷ್ಟ್ರಪತಿಗಳ ಚಿನ್ನದ ಪದಕ, ಸಾರ್ಥಕ್‌ರಾಜ್ ಸಾಗರ್ ಪಾಟೀಲ್ ಅವರಿಗೆ ಬೆಳ್ಳಿ ಪದಕ ಹಾಗೂ ರಿಷಿ ಭಲ್ಲಾರಾ ಅವರಿಗೆ ಕಂಚಿನ ಪದಕ ಪ್ರದಾನ ಮಾಡಲಾಯಿತು. ಅತ್ಯುತ್ತಮ ಸಾಧನೆಗಾಗಿ ಚಾರ್ಲಿ ಸ್ಕ್ವಾಡ್ರನ್‌ಗೆ ಮುಖ್ಯಸ್ಥರ ಬ್ಯಾನರ್ ನೀಡಲಾಯಿತು. ಒಟ್ಟು ೩೯೯ ಕೆಡೆಟ್‌ಗಳು ಸಶಸ್ತ್ರ ಪಡೆಗಳಿಗೆ ಸೇರ್ಪಡೆಗೊಂಡರು.

<><><><>

ಕ್ರೈಸ್ಟ್‌ಚರ್ಚ್‌ನಲ್ಲಿ ನಡೆಯುತ್ತಿರುವ ಭಾರತ ವಿರುದ್ಧದ ಎರಡನೇ ಟೆಸ್ಟ್ ಪಂದ್ಯದ ಮೂರನೇ ದಿನದಾಟದ ಅಂತ್ಯಕ್ಕೆ ಆತಿಥೇಯ ನ್ಯೂಜಿಲೆಂಡ್ ತನ್ನ ಎರಡನೇ ಇನ್ನಿಂಗ್ಸ್‌ನಲ್ಲಿ ಮೂರು ವಿಕೆಟ್ ನಷ್ಟಕ್ಕೆ ೧೩೩ ರನ್ ಗಳಿಸಿದ್ದು, ಒಟ್ಟು ೨೪೩ ರನ್‌ಗಳ ಮುನ್ನಡೆ ಸಾಧಿಸಿದೆ. ದಿನದಾಟ ಮುಕ್ತಾಯವಾದಾಗ ರಚಿನ್ ರವೀಂದ್ರ ೪೬ ರನ್ ಹಾಗೂ ಡ್ಯಾರಿಲ್ ಮಿಚೆಲ್ ೫ ರನ್ ಗಳಿಸಿ ಕ್ರೀಸ್‌ನಲ್ಲಿದ್ದರು. ಇದಕ್ಕೂ ಮುನ್ನ, ಭಾರತವು ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೨೪೬ ರನ್‌ಗಳಿಗೆ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತು. ಮೂರನೇ ದಿನದಂದು ಭಾರತದ ಪರ ಧ್ರುವ್ ಜುರೆಲ್ ೧೭೦ ಎಸೆತಗಳಲ್ಲಿ ೪೪ ರನ್ ಗಳಿಸಿದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>